# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಜಿಎಂ/1530/2016/ಪಿಪಿ ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು,

ದಿನಾಂಕ: 28/09/2020.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ

ವಿಷಯ: ಶ್ರೀಮತಿ ಕವಿತಾ ವಾರಂಗಲ್, ಜಿಲ್ಲಾ ವ್ಯವಸ್ಥಾಪಕರು, ಮತ್ತು ಡೆಪ್ಯೂಟಿ ಜೆನರಲ್ ಮ್ಯಾನೇಜರ್, ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಬೆಳಗಾವಿ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

*****

1. ಶ್ರೀ ನಿಂಗಪ್ಪ ಮಾರುತಿ ಭಜಂತ್ರಿ, ವಕೀಲರು, ಕಟಕಭಾವಿ, ರಾಯಭಾಗ್ ತಾ. ಬೆಳಗಾವಿ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪುಡತ್ತಾರೆ) ಇವರು ಶ್ರೀಮತಿ ಕವಿತಾ ವಾರಂಗಲ್, ಜಿಲ್ಲಾ ವ್ಯವಸ್ಥಾಪಕರು, ಮತ್ತು ಡೆಪ್ಯೂಟಿ ಜೆನರಲ್ ಮ್ಯಾನೇಜರ್, ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಬೆಳಗಾವಿ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪುಡತ್ತಾರೆ) ಇವರ ವಿರುದ್ಧ ದೂರನ್ನು ಸಲ್ಲಿಸಿರುತ್ತಾರೆ.

2. ದೂರುದಾರರು ಈ ಪ್ರಕರಣದಲ್ಲಿ ಬೆಳಗಾವಿ ತಾಲ್ಲೂಕಿನಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಫಲಾನುಭವಿಗಳಿಗೆ ಕೊಳವೆ ಬಾವಿ ತಗೆಸಲಾಗಿದೆ ಮತ್ತು 2014-15 ಮತ್ತು 2015-16 ರಲ್ಲಿ ಅಂತಹ ಫಲಾನುಭವಿಗಳ ಪಟ್ಟಿ ನೀಡಲಾಗಿದು, ಅದರಲ್ಲಿ ಕೊಳವೆ ಬಾವಿಗಳನ್ನು ಎಷ್ಟು ಪ್ರಮಾಣದಲ್ಲಿ ಕೊರಿಸಲಾಗಿದೆ ಎಂಬ ವಿವರಣೆ ಇದ್ದು ಈ ಕಾಮಗಾರಿಯಲ್ಲಿ ಎದುರುದಾರರು ಸಾಕಷ್ಟು ಅವ್ಯವಹಾರ ನಡೆಸಲಾಗಿದ್ದು

ಅವರು ತಮ್ಮ ಅಧಿಕಾರ ದುರುಪಯೋಗ ಮಾಡಿಕೊಂಡು ಅವ್ಯವಹಾರ ಮಾಡಿರುತ್ತಾರೆಂದು ತನಿಖೆಗೆ ಒತ್ತಾಯಿಸಿ ಈ ದೂರನ್ನು ಸಲ್ಲಿಸಿರುತ್ತಾರೆ.

3. ಈ ದೂರಿನ ಸಂಬಂಧ ಮೊದಲನೆ ಹಂತದಲ್ಲಿ ನಿರ್ದೇಶಕರು ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ ಇವರಿಂದ ವಿಚಾರಣ ವರದಿ ತರಿಸಲು ಕ್ರಮ ಜರುಗಿಸಲಾಗಿದ್ದು, ಸದ್ರಿಯವರು ಈ ದೂರಿನ ಸಂಬಂಧ ಮುಖ್ಯ ವ್ಯವಸ್ಥಾಪಕರು, ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ ಬೆಳಗಾವಿ ಇವರಿಗೆ ಸ್ಥಳ ತನಿಖೆ ಮಾಡಿ 31 ಬೋರವೆಲ್ ಕೊರೆಯಿಸಲಾದ ಬಗ್ಗೆ ವರದಿ ಸಲ್ಲಿಸಲು ಸೂಚಿಸಿರುತ್ತಾರೆ. ಆ ನಂತರದಲ್ಲಿ ನಿರ್ದೇಶಕರು ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ ಇವರು 2014-15, 2015-16ನೇ ಸಾಲಿನಲ್ಲಿ ಕೊರೆಯಿಸಲಾದ ಬೋರವೆಲ್ ಬಗ್ಗೆ ಫಲಾನುಭವಿಗಳ ಪಟ್ಟಿಯಲ್ಲಿರುವಂತೆ ಆಯ್ದ ಕೆಲವು ವ್ಯಕ್ತಿಗಳ ಬಗ್ಗೆ ಸ್ಥಳ ತನಿಖೆ ಮಾಡಿದಾಗ ಕೊಳವೆ ಬಾವಿ ತೆರೆಯಿಸಲು ತೋರಿಸಲಾದ ವೆಚ್ಚ ಮತ್ತು ಬೋರವೆಲ್ ಕೇಸಿಂಗ್ ಪೈಪ್‌ಗಳ ಬಗ್ಗೆ ಗುರುತರವಾದ ವ್ಯತ್ಯಾಸ ಕಂಡುಬಂದಿರುವುದಿಲ್ಲ ಎಂದು ತಮ್ಮ ವರದಿಯಲ್ಲಿ ವಿವರಿಸಿರುತ್ತಾರೆ.

4. ತದನಂತರದಲ್ಲಿ ವಿಚಾರಣ ವರದಿ ಅಂಶಗಳನ್ನು ದೂರುದಾರರಿಗೆ ಕಳುಹಿಸಿ ಅವರಿಂದ ಪ್ರತ್ಯುತ್ತರ ಸಲ್ಲಿಸಲು ಪತ್ರ ಬರೆದಿದ್ದು, ಸದರಿಯವರು ತಮ್ಮ ಪ್ರತ್ಯುತ್ತರದಲ್ಲಿ ವ್ಯವಸ್ಥಾಪಕ ನಿರ್ದೇಶಕರು ನೀಡಿರುವ ವರದಿ ವಾಸ್ತವಾಂಶಗಳಿಗೆ ವಿರುದ್ಧವಾಗಿರುತ್ತದೆ ಎಂದು, ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ ಮತ್ತು ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮ ಬೆಳಗಾವಿ ಇವರಿಂದ 2014-15 ಮತ್ತು 2015-16ನೇ ಸಾಲಿನಲ್ಲಿ ಗಂಗಾ ಕಲ್ಯಾಣ ಅಡಿ ಯೋಜನೆಯಲ್ಲ ತೆಗೆಯಲಾದ ಕೊಳವೆ ಭಾವಿಗಳ ಆಳ ಕಮ್ಮಿ ಇದ್ದರೂ ಸಹ ಹೆಚ್ಚು ಆಳಕ್ಕೆ ಕೊಳವೆ ಭಾವಿಯನ್ನು ತೋಡಿದ್ದು ಹಣವನ್ನು 700 ಅಡಿಗಳಿಗೆ ಹಾಗೂ ಇನ್ನು ಮೇಲ್ಪಟ್ಟ ಆಳಕ್ಕೆ ತೆಗೆದಿರುವುದಾಗಿ ತೋರಿಸಿ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ.

ವ್ಯವಸ್ಥಾಪಕ ನಿರ್ದೇಶಕರು ನೀಡಿರುವ ವರದಿಯು ನೈಜತೆಯಿಂದ ಕೂಡಿರುವುದಿಲ್ಲ ಎಂದು ತಿಳಿಸಿದ್ದು ಜಿಲ್ಲಾಧಿಕಾರಿಗಳಿಂದ ಈ ಬಗ್ಗೆ ಸೂಕ್ತ ತನಿಖೆ ಮಾಡಿಸಿದಲ್ಲಿ ಸತ್ಯಾಂಶಗಳು ಹೊರಬೀಳಬಹುದಾಗಿದೆ ಎಂದು ಕೋರಿರುತ್ತಾರೆ.

5. ನಿರ್ದೇಶಕರು ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಇವರು ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ ಇವರು ಸ್ಥಳ ಪರಿಶೀಲನೆ ನಡೆಸಿ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ ಇದರ ವತಿಯಿಂದ 2014-15 ಮತ್ತು 2015-16ನೇ ಸಾಲಿನಲ್ಲಿ ಕೊರೆದಿರುವ ಕೊಳವೆಬಾವಿಗಳ ಆಳದಲ್ಲಿ ಸುಳ್ಳು ಆಳವನ್ನು ತೋರಿಸಿದ ಸ್ಥಳ ಪರಿಶೀಲನೆ ಮಾಡಿ ಇವರೊಡನೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಇವರು ಸಹ ಸ್ಥಳ ಪರಿಶೀಲನೆ ಮಾಡಿ ಸಲ್ಲಿಸಿರುವ ವರದಿಯ ಪ್ರತಿಯನ್ನು ಈ ಕಛೇರಿಗೆ ಹಾಜರುಪಡಿಸಿರುತ್ತಾರೆ. ಈ ವರದಿಯನ್ನು ಪರಿಶೀಲಿಸಿದಲ್ಲಿ ಈ ಹಿಂದೆ ವ್ಯವಸ್ಥಾಪಕ ನಿರ್ದೇಶಕರು, ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ ಇವರು ಸಲ್ಲಿಸಿದ್ದ ವರದಿಯನ್ನು ಅನುಸರಿಸಿ ನೀಡಿರುವ ವರದಿಯೆಂದು ಕಂಡುಬರುತ್ತದೆ.

6. ದೂರಿನ ಸಂಬಂಧ ತನಿಖೆ ಮುಂದುವರೆಸಲಾಗಿ ಜಿಲ್ಲಾಧಿಕಾರಿಗಳು, ಬೆಳಗಾವಿ ಇವರು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಕಾರ್ಯಪಾಲಕ ಇಂಜಿನಿಯರ್, ಪಂ.ರಾಜ್ ಇಂಜಿನಿಯರಿಂಗ ಇಲಾಖೆ, ಗ್ರಾಮೀಣಾಭಿವೃದ್ಧಿ ಕುಡಿಯುವ ನೀರಿನ ಯೋಜನೆ ವಿಭಾಗಕ್ಕೆ ಇವರಿಗೆ ವಿಚಾರಣ ವರದಿ ಸಲ್ಲಿಸಲು ಸೂಚಿಸಿರುತ್ತಾರೆ. ಈ ಹಂತದಲ್ಲಿ ಸದ್ರಿಯವರು ತಮ್ಮ ವಿಚಾರಣಾ ವರದಿಯಲ್ಲಿ:

7. ಜಿಲ್ಲಾಧಿಕಾರಿಗಳು, ಬೆಳಗಾವಿ ಇವರು ತನಿಖಾ ತಂಡಗಳನ್ನು ರಚಿಸಿ ಆದೇಶಿಸಿದ್ದು ಅದರಂತೆ ಈ ಅವಧಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕಾರ್ಯನಿರ್ವಾಹಕ

ಅಭಿಯಂತರರಾದ ಶ್ರೀ ವಿ.ಜೆ.ರಾಯಕರ ಇವರು ದಿನಾಂಕ: 06/07/2017 ಮತ್ತು 07/08/2017 ರಂದು ರಾಯಬಾಗ ತಾಲ್ಲೂಕಿನ ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದರು ಬೋರವೆಲ್ ಕೊರೆಯಿಸಿರುವ ಗ್ರಾಮಗಳಿಗೆ ಸ್ಥಳ ಪರಿವೀಕ್ಷಣೆಯನ್ನು ಕೈಗೊಂಡು ಪರಿವೀಕ್ಷಣಾ ವರದಿಯನ್ನು ಸಲ್ಲಿಸಿರುತ್ತಾರೆ. ಜಿಲ್ಲಾ ವ್ಯವಸ್ಥಾಪಕರು, ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಳಗಾವಿ ಜಿಲ್ಲೆ ಇವರು ತಮ್ಮ ಪತ್ರದಲ್ಲಿ ವಿವರಿಸಿದಂತೆ ರಾಯಬಾಗ ತಾಲ್ಲೂಕಿನ ದಿಗ್ಗೆವಾಡಿ, ನಿಡಗುಂದಿ, ಹಾರೊಗೇರಿ ಕ್ರಾಸ್, ಕಪಾಲಗುದ್ದಿ (ಮಾರಾಕುಡಿ), ಕಟಕಬಾವಿ ಗ್ರಾಮಗಳಲ್ಲಿ ಹಾಗೂ ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ಇವರು ವಿವರಿಸಿದಂತೆ ರಾಯಬಾಗ ತಾಲ್ಲೂಕಿನ ಅಲಖನೂರ ಗ್ರಾಮದಲ್ಲಿ ಬೋರವೆಲ್ ಕೊರೆದ ಸ್ಥಳದಲ್ಲಿ ಬೆಳೆಗಳು ಇರುವುದರಿಂದ ಪಂಪಸೆಟ್ ಹಾಗೂ ಇತರೆ ಉಪಕರಣಗಳನ್ನು ಹೊರಗೆ ತೆರೆಯುವುದಕ್ಕೆ ರೈತರು ವಿರೋಧ ವ್ಯಕ್ತಪಡಿಸಿರುತ್ತಾರೆ ಎಂದು ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಳಗಾವಿ ಇವರಿಗೆ ವರದಿಯನ್ನು ಸಲ್ಲಿಸಿರುತ್ತಾರೆ.

ಕೊಳವೆ ಬಾವಿಯ ರೇಚಕಯಂತ್ರವನ್ನು ಮತ್ತು ಪೈಪಗಳನ್ನು ತೆಗೆದು ಅಳತೆ ಮಾಡಿದ ನಂತರ ಪುನ: ಸ್ಥಾಪಿಸಲು, ಕೊಳವೆ ಬಾವಿಗೆ ಅಳವಡಿಸಿದ ಕಬ್ಬಿಣದ ಕೇಸಿಂಗ್ ಪೈಪಿನ ಉದ್ದವನ್ನು ಅಳೆಯಲು ಬ್ಯಾಟರಿ ಸಮೇತವಿರುವ ಆಯಸ್ಕಾಂತ ಮತ್ತು ಕೊಳವೆ ಬಾವಿಯಲ್ಲಿರುವ ಪಿವ್ಹಿಸಿ ಪೈಪಗಳ ಕೇಸಿಂಗ್ ಪೈಪನ್ನು ಅಳತೆ ಮಾಡಲು ವಾಟರ್ ಪ್ರೂಪ್ ಕ್ಯಾಮೇರಾಗಳ ಅಗತ್ಯವಿದ್ದು, ಸದರಿ ಬೋರವೆಲ್‌ಗಳ ಆಳದ ಅಳತೆಯನ್ನು ಮಾಡಲು ಪ್ರತಿ ಬೋರವೆಲ್ ಒಂದಕ್ಕೆ ಸುಮಾರು ರೂ.5,000/- ರಿಂದ ರೂ.6,000/-ಗಳಷ್ಟಾಗುತ್ತಿದ್ದು ಹಾಗೂ ಸದರಿ ಬೋರವೆಲ್‌ಗಳ ಅಳತೆ ಮಾಡುವ ಸಂದರ್ಭದಲ್ಲಿ ಒಂದು ವೇಳೆ ರೇಚಕಯಂತ್ರವು ಕಟ್ಟಾಗಿ/ಮುರಿದು ಕೊಳವೆ ಬಾವಿಯ ಒಳಗೆ ಬಿದ್ದು ಹೋದರೆ ಹೊಸ ರೇಚಕ ಯಂತ್ರ

ಅಳವಡಿಸುವ ವೆಚ್ಚವನ್ನು ಯಾವ ಇಲಾಖೆಯಿಂದ ಹಾಗೂ ಯಾವ ಲೆಕ್ಕ ಶೀರ್ಷಿಕೆಯಡಿ ಭರಿಸಬಹುದಾಗಿದೆ ಎಂಬುದರ ಮಾಹಿತಿಯನ್ನು ಜಿಲ್ಲಾ ವ್ಯವಸ್ಥಾಪಕರು, ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ (ನಿ), ಮತ್ತು ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ (ನಿ), ಬೆಳಗಾವಿಯವರು ಪ್ರಶ್ನಿಸಿರುತ್ತಾರೆ ಎಂದು ನಮೂದಿಸಿರುತ್ತಾರೆ.

8. ಸದರಿ ಪ್ರಕರಣದ ಕಡತದಲ್ಲಿ ಲಭ್ಯವಿರುವ ವರದಿಗಳನ್ನು ಪರಿಶೀಲಿಸಿದಾಗ 26.6.2017ರಂದು ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ ರವರು ನೀಡಿರುವ ವರದಿಯನ್ನು ಪರಿಶೀಲಿಸಲಾಗಿ ಸಿದ್ದಪ್ಪ ಸಣ್ಣಪ್ಪ ಗೊರವಿ ಮಲ್ಲಪ್ಪ ಭೀಮಪ್ಪ ಪೂಜಾರ್, ಮಂಜುಳ ಈರಪ್ಪ ನಾಯಕ್, ಬಸವಂತ ಈರಪ್ಪ ಯರಗಣವಿ, ಬಸಪ್ಪ ಭೀಮಪ್ಪ ತಳವಾರ್ ಇವರ ಕೊಳವೆ ಬಾವಿಗಳಿಗೆ ಖುದ್ದು ಪರಿಶೀಲಿಸಿದಾಗ 25 ಮೀಟರ್, 13 ಮೀಟರ್, 5 ಮೀಟರ್ ಹಾಗೂ 6 ಮೀಟರ್ ಅಷ್ಟು ಆಳದ ವ್ಯತ್ಯಾಸವಿರುವುದು ಮೇಲ್ನೋಟಕ್ಕೆ ಸಾಬೀತಾಗುತ್ತದೆ. ಜೊತೆಗೆ ಇವುಗಳ ಕುರಿತು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ಬಸಪ್ಪ ಭೀಮಪ್ಪ ತಳವಾರ್ ಇವರ ಕೊಳವೆ ಬಾವಿ 145 ಮೀಟರ್ ಕೊರೆಸಬೇಕಾಗಿದ್ದು ಆದರೆ 119 ಮೀಟರ್ ಕೊರೆಯಿಸಿ 26 ಮೀಟರ್‌ಗಳ ಹೆಚ್ಚುವರಿ ನಮೂದಿಸಿ ಬಿಲ್ಲನ್ನುಮಾಡಲಾಗಿದೆ. ಮಂಜುಳ ಈರಪ್ಪ ನಾಯಕ್ ಇವರಿಗೆ 222ಮೀಟರ್ ಕೊಳವೆ ಬಾವಿ ಕೊರೆಯಲಾಗಿದೆ ಎಂದು ಬಿಲ್ಲು ತೆಗೆದಿದ್ದು ಆದರೆ 209 ಮೀಟರ್ ಮಾತ್ರ ಆಳ ಕೊರೆಯಲಾಗಿದೆ ಎಂದು ತನಿಖಾ ವರದಿಯಲ್ಲಿ ನಮೂದಿಸಿದೆ. ಮಲ್ಲಪ್ಪ ಭೀಮಪ್ಪ ಪೂಜಾರಿ ಇವರಿಗೆ ಸೇರಿದ ಕೊಳವೆ ಬಾವಿ ಕೊರೆತ 177 ಮೀಟರ್ ಇದ್ದು ಸ್ಥಳ ಪರಿಶೀಲನೆ ನಡೆಸಿದಾಗ ಮತ್ತು ಅಳತೆ ಮಾಡಿದಾಗ 152 ಮೀಟರ್ ಇರುವುದಾಗಿ ಕಂಡುಬಂದಿದ್ದು ಹೆಚ್ಚುವರಿಯಾಗಿ 26 ಮೀಟರಿನ ಹಣವನ್ನು ಸೆಳೆಯಲಾಗಿರುತ್ತದೆ. ಇವುಗಳ ಮೇಲಿನ ಆಧಾರದಿಂದ ಫಿರ್ಯಾದಿದಾರರು ನೀಡಿರುವ ದಾಖಲೆಗಳನ್ನು ಪುಷ್ಟೀಕರಿಸಬಹುದಾಗಿರುತ್ತದೆ

ಜೊತೆಗೆ ಫಿರ್ಯಾದಿದಾರರು ಹೇಳಿರುವಂತೆ ಕೊಳವೆ ಬಾವಿ ಕೊರೆದ ಜಮೀನುಗಳನ್ನು ಬಿಟ್ಟು ಬೇರೆ ಜಮೀನುಗಳನ್ನು ಅಳತೆ ಮಾಡಲಾಗಿದೆ ಅಧಿಕಾರಿಗಳು ತಯಾರಿಸಿದ ವರದಿಯನ್ನೆ ಗಮನಿಸಿದ್ದಲ್ಲಿ ಕೇವಲ 6 ಜನರ ವರದಿಯನ್ನು ಮಾತ್ರ ನೀಡಿದ್ದು, ಸದರಿ 6 ಜನರ ವರದಿಯಲ್ಲಿ 10 ಮೀಟರ್‌ಗು ಅಧಿಕ ಹೆಚ್ಚುವರಿಯಾಗಿ ನಮೂದಿಸಿ ಬಿಲ್ಲನ್ನು ಪಡೆದಿರುವುದು ಕಂಡುಬರುತ್ತದೆ. ಇದರಿಂದ ಎಸ್.ಸಿ. ಜನಾಂಗಕ್ಕೆ ಸೇರಿದ 171 ಕೊಳವೆ ಬಾವಿಗಳು ಹಾಗೂ ಎಸ್.ಟಿ. ಜನಾಂಗಕ್ಕೆ ಸೇರಿದ 198 ಕೊಳವೆ ಬಾವಿಗಳು ಇವುಗಳಲ್ಲಿ ಅಧಿಕಾರ ದುರುಪಯೋಗ ಮತ್ತು ಹೆಚ್ಚಿನ ಹಣವನ್ನು ಸೆಳೆದಿರುವುದು ಮೇಲ್ನೋಟಕ್ಕೆ ಸಾಬೀತಾಗುತ್ತದೆ. ಇವುಗಳನ್ನು ತನಿಖಾ ವರದಿಗಳು ಪುಷ್ಟೀಕರಿಸಿರುವುದರಿಂದ ಮತ್ತು ಇತರೆ ಜನರ ಕೊಳವೆ ಬಾವಿಗಳನ್ನು ಅಳತೆ ಮಾಡಲು ಜನರು ಬಿಡಲಿಲ್ಲ ಎಂಬ ಕಾರಣ ನೀಡಿರುವ ಅಂಶವು ಸಮಂಜಸವಾಗಿರುವುದಿಲ್ಲ.

9. ಇದರಿಂದ, ಎದುರುದಾರರು ಮೇಲ್ನೋಟಕ್ಕೆ ಸರ್ಕಾರದ ಹಣವನ್ನು ದುರುಪಯೋಗ ಪಡಿಸಿಕೊಂಡು ಕೊಳವೆ ಬಾವಿಗಳನ್ನು ಕೊರೆದ ವ್ಯಕ್ತಿಗಳೊಂದಿಗೆ ಸೇರಿ ತಮ್ಮ ಲಾಭವನ್ನು ಮಾಡಿಕೊಂಡಿರುವುದು ಮತ್ತು ವರದಿಯಲ್ಲಿ ತಪ್ಪಾಗಿ ನಮೂದಿಸಿರುವುದು ಸರ್ಕಾರಕ್ಕೆ ಹಾನಿ ಉಂಟು ಮಾಡಿರುವುದು ಸ್ಪಷ್ಟವಾಗಿ ತಮ್ಮ ಅಧಿಕಾರ ದುರುಪಯೋಗದಿಂದ ಈ ರೀತಿ ಸರ್ಕಾರಕ್ಕೆ ಮತ್ತು ಫಲಾನುಭವಿಗಳಿಗೆ ಹಾನಿ ಉಂಟು ಮಾಡಿರುವುದು ನೇರವಾಗಿ ಸಾಬೀತಾಗುತ್ತದೆ.

10. ಈ ಮೇಲ್ಕಾಣಿಸಿದ ಅಂಶಗಳಿಂದ ಎದುರುದಾರರು ಕೊಳವೆ ಬಾವಿ ಕೊರೆಯುವ ಗುತ್ತಿಗೆದಾರರೊಂದಿಗೆ ಶಾಮೀಲಾಗಿ ತಮ್ಮ ಅಧಿಕಾರ ದುರುಪಯೋಗ ಮತ್ತು ತಪ್ಪು ದಾಖಲೆಗಳನ್ನು ಸೃಷ್ಟಿಸಿ ಸರ್ಕಾರಕ್ಕೆ ಸಲ್ಲಿಸಿರುವುದು ಇದರಿಂದ ಸರ್ಕಾರಕ್ಕೆ ಆರ್ಥಿಕ ಹಾನಿ ಉಂಟು ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗುತ್ತದೆ.

11. ಮೇಲೆ ಚರ್ಚಿಸಲಾದ ಕಾರಣಗಳ ಹಿನ್ನಲೆಯಲ್ಲಿ ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ ನಿಯಮಗಳು 3(1) (i) ರಿಂದ (iii) ರನ್ವಯ ಎದುರುದಾರರಾದ ಶ್ರೀಮತಿ ಕವಿತಾ ವಾರಂಗಲ್, ಜಿಲ್ಲಾ ವ್ಯವಸ್ಥಾಪಕರು, ಮತ್ತು ಡೆಪ್ಯೂಟಿ ಜೆನರಲ್ ಮ್ಯಾನೇಜರ್, ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಬೆಳಗಾವಿ ರವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು "ಉಪಲೋಕಾಯುಕ್ತರಿಗೆ" ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

12. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ವರದಿ ಮಾಡಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿದೆ.

N. Anand
2/8/9

**[ನ್ಯಾಯಮೂರ್ತಿ ಎನ್. ಆನಂದ]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**